# ಬಟ್ಟೆಗೆ ಲಿಂಗ ಭೇದ ಇಲ್ಲ

ಬೇಂದ್ರೆಯವರ ಆತ್ಮ ಕಥನಾತ್ಮಕ ವಾದ ದೀರ್ಘ ಕವನ 'ಸಖೀಗೀತ'ದಲ್ಲಿ ಪಲ್ಲವಿ ಯಂತೆ ಒಂದು ಸಾಲು ಕೇಳಿಸುತ್ತದೆ. 'ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ' ಎಂಬ ಸಾಲು. ಈ ನಂಟಿಗೆ ಕೊನೆ ಇಲ್ಲ. ಅಥವಾ ಕೊನೆಯೇ ಇಲ್ಲದಿರಬಹುದು. ಕೊನೆ ಎಂಬ ಯೋಚನೆಯೇ ತಪ್ಪಿರಬಹುದು. ನಂಟಿಗೆ ಒಂದೇ ರೂಪವು ಇಲ್ಲ. ನೂರಾರು ರೂಪಗಳು. ಅಂಟಿದ ನಂಟು ಎಂದು ಹೇಳಿದರೂ ಇದು ಎಲ್ಲೋ ಹೊರಗಿನಿಂದ ಅಂಟಿದುದು ಅಲ್ಲ. ಜೀವದ ಒಳಗಿನಿಂದಲೇ ಜೀವದ ಅಂಗವಾಗಿ- ಅಂಗವೇನು- ಜೀವದ ಒಡಲೇ ಆಗಿ- ಇರುವಂಥದು. ಆದುದರಿಂದ ನಂಟಿನಿಂದ ಬಿಡಿಸಿಕೊಳ್ಳುವ ಪ್ರಶ್ನೆಯೇ ಇಲ್ಲವಾಗಿ- ಈ ಅವಸ್ಥೆಯಲ್ಲಿ ಯೇ ನಂಟಿನ ಸೂಕ್ಷ್ಮವನ್ನು ಅರಿಯಬೇಕಷ್ಟೇ. ಅಲ್ಲದೇ ಅರಿಯುವುದೆಂದರೆ ಇರುವಿಕೆಗಿಂತ ಅದೇನೋ ಒಂದು ಬೇರೆಯಾದ ವಿದ್ಯಮಾನವೂ ಅಲ್ಲ-ಎಂಬೆಲ್ಲಾ ಅರ್ಥಗಳನ್ನು ಹೊಮ್ಮಿಸುವ ಸಾಲು ಇದು. ನನ್ನ ಪ್ರಕಾರ ಗಂಡು ಹೆಣ್ಣಿನ ಸಂಬಂಧ ದಲ್ಲಿ ಹೆಣ್ಣಿನೊಡನೆ ಗಂಡು ಆಡಬಲ್ಲ- ಪ್ರೀತಿ ಮತ್ತು ಅಚ್ಚರಿಯಿಂದ ಆಡಬಲ್ಲ- ಈ ಎರಡರ ನಡುವಣ ನೂರು ಭಾವಗಳನ್ನು ಕಂಡುಂಡ ಅನುಭವದಿಂದ ಆಡಬಲ್ಲ- ಬಹು ಅರ್ಥಪೂರ್ಣವಾದ ಸಾಲು ಇದು. ಸಖೀಗೀತ ಕ್ಕಿಂತ ಹದಿನೇಳು ವರ್ಷ ಮುನ್ನವೇ- ಪ್ರಾಯಶಃ ಮದುವೆಯಾದ ಹೊಸತರಲ್ಲಿ- ಬೇಂದ್ರೆ ' ಗಂಡಸು ಹೆಂಗಸಿಗೆ' ಎಂಬ ಕವಿತೆ ಬರೆದಿದ್ದರು. ಅದು ಹೀಗೆ ಪ್ರಾರಂಭವಾಗುತ್ತದೆ.

ತಾಯಿ ಕನಿ ಮನೆಯೆ ಅಕ್ಕ ಅಕ್ಕರತೆಯೇ  
ಬಾ ಎನ್ನತಂಗಿ ಬಾ ಮುದ್ದು ಬಂಗಾರವೇ  
ನೀ ಯೆನ್ನ ಹೆಂಡತಿಯೋ ಮೈಗೊಂಡ ನನ್ನಿಯೋ ಮಗಳೋ ನನ್ನೆದೆಯ ಮುಗುಳೋ-

ಇಲ್ಲಿ ಎಲ್ಲ ಸಂಬಂಧಗಳೂ ತಾಯಿಯಿಂದ ತೊಡಗಿ ಮಗಳ ತನಕ ಬಂದಿವೆ. ಗೆಳತಿಯೂ ಬಂದಿದ್ದಾಳೆ. 'ತಿಂಗಳಿನ ಬೆಳಕ ಹೊಂಗೆಳತಿ ಜೊತೆಯಾದೆನೀ ಕಂಗಳಿಗೆ ಕತ್ತಲೆಯೊಳಿದ್ದವಗೆ' ಎಂಬ ಸಾಲು ಮುಂದೆ ಇದೆ. 'ಜೊತೆಯಾದೆ ನೀ ಕಂಗಳಿಗೆ'- ಎಂಬ ಸಾಲನ್ನು ಗಮನಿಸಿ. ಅದ್ಭುತವಾದ ಮಾತಿದು. ನನ್ನ ಕಣ್ಣುಗಳಿಗೆ ನೀನು 'ದೃಶ್ಯ' ಮಾತ್ರ ಅಲ್ಲ. ನನ್ನ ಕಣ್ಣಿಗೆ ನೀನು ಜೊತೆ ಕಣ್ಣು. ನಾವಿಬ್ಬರೂ ಸೇರಿ ನೋಡುತ್ತಿರುವುದು ಲೋಕದ ದೃಶ್ಯ'. ಇದು ಒಂದೆಡೆಯಾದರೆ, 'ಜೊತೆಯಾದೆ ನೀ ಕಂಗಳಿಗೆ'- ಎನ್ನುವಾಗ ಕನ್ನಡಿಯಂತೆ ನನ್ನ ಕಣ್ಣೆದುರಿನ ಕಣ್ಮಣಿ ಯೂ ಹೌದು ನೀನು, ಅಂದಾಗ ನನ್ನ ಕಣ್ಣಿನಲ್ಲಿ ನಿನ್ನ, ನಿನ್ನ ಕಣ್ಣಿನಲ್ಲಿ ನನ್ನ ಪ್ರತಿಫಲನ ನಿರಂತರ ನಡೆದೇ ಇದೆ.

'ಕಣ್ಣೆದಿರುಗಣ್ಣಿನೊಳಗೊಬ್ಬರೊಬ್ಬರ ಗೊಂಬೆ ನಮ್ಮಿಬ್ಬರೊಳಗೆ ಹಬ್ಬಿಹುದು' ಹೀಗೆ ನಿನ್ನ ಕಣ್ಣಿನಲಿ ನನ್ನನ್ನು ನಾನು ನೋಡಲಾಗದೆ ಇರುತ್ತಿದ್ದರೆ ನಾನು ಕತ್ತಲೆಯಲ್ಲೇ ಇರುವಂತೆ ಆಗುತ್ತಿತ್ತು ಎನ್ನುವ ಭಾವ- ಬೇಂದ್ರೆಯವರಿಗೆ. ಇದು ಮೂಲ ಭಾವ. ನಾಲ್ಕು ಕಣ್ಣು ಸೇರದೆ ಪೂರ್ಣ ಚಿತ್ರವಿಲ್ಲ ಎನ್ನುವ ನಿಲುವು. ಬೇಂದ್ರೆಯವರ ಇನ್ನೊಂದು ಶ್ರೇಷ್ಠ ಕವನ 'ಕಲ್ಪವೃಕ್ಷ ವೃಂದಾವನಗಳಲ್ಲಿ'ಯಲ್ಲಿ 'ಅಲ್ಲಿ ಎಲ್ಲರಿಗೆ ನಾಲ್ಕು ಕೈಗಳೋ ಮಾಟ ತಪ್ಪದಿಹವು' ಎಂಬ ಸಾಲು ಇದೆ. 'ನಾಲ್ಕು ಕೈಗಳು' ಎನ್ನುವಲ್ಲಿ 'ನಾಲ್ಕು ಕಂಗಳೋ' ಎಂದು ಕೂಡ ಹೇಳಬಹುದು. ನಾಲ್ಕು ಎನ್ನುವ ಪರಿಕಲ್ಪನೆ ಬೇಂದ್ರೆಯವರ ಚಿಂತನೆಯ ಭಾಗವೇ ಆಗಿರುವುದನ್ನು ಎಲ್ಲರೂ ಬಲ್ಲರು. ನಾಲ್ಕೂ ತಂತಿಗಳು ಮಿಡಿಯುವುದು ಅವರಿಗೆ ಮುಖ್ಯ. ಅನುರಣನ ಅವರಿಗೆ ಮುಖ್ಯ. ನಾಕೆನ್ನುವ ಪರಿಕಲ್ಪನೆಗೂ ಸಖೀ ತತ್ವಕ್ಕೂ ಬಹಳ ಹತ್ತಿರ ಇದೆ! 'ಕಲ್ಪವೃಕ್ಷ ಬೃಂದಾವನಗಳಲಿ'ಯೂ ಕೇಂದ್ರ ಪಾತ್ರ ಸಖಿಯೇ ಆಗಿದ್ದಾಳೆ. ಗಂಡು-ಹೆಣ್ಣು, ನಾಲ್ಕು ಕಣ್ಣುಗಳಲ್ಲಿ ಯೂ ತಮ್ಮನ್ನು ತಾವು ನೋಡಿಕೊಂಡ ಅನುಭವದಿಂದ ತಿಳಿದು ಬಂದುದೇನೆಂದರೆ- ಹೆಣ್ಣು- ಗಂಡು ಹೊಂದಿರುವುದು ಒಂದೇ ಬಟ್ಟೆ ಎಂಬ ಅರಿವು. 'ಗಂಡಸು ಹೆಂಗಸಿಗೆ' ಕವಿತೆಯ ಕೊನೆಯ ಸಾಲುಗಳಿವು.

'ನನ್ನ ನಿನ್ನಯ ಮನದ ಜೊನ್ನ ಮಗ್ಗದ ಮೇಲೆ  
ನಿನ್ನ ಮೆತ್ತನ್ನೆದೆಯ ಕಸೆಗೆ ಕಸೆಯನುಗೊಳಿಸಿ  
ನನ್ನಿ ನೇಕಾರಿತಿಯು ಮುಗಿಯದಿಹ ಬಟ್ಟೆಯನ್ನನವರತ ನೇಯುತಿಹಳು'

ಇದು ತೆಗೆದಿರಿಸಬಹುದಾದ, ಬೇಕಾದಾಗ ತೊಡಬಲ್ಲ ಬಟ್ಟೆಯಲ್ಲ- ಅಂತಃಕರಣದಲ್ಲಿ ನೇದ, ನೇಯುತ್ತಲೇ ಇರುವ ಬಟ್ಟೆ. ಬಾಳಬಟ್ಟೆ! ಇದು ಬಾಳನ್ನು ಒಳಗಿನಿಂದಲೇ ಅನುಭವಿಸಿ ಪಡೆದ ಅರಿವು. ಬಾಳಿಗೆ ಶರಣಾಗಿ ಪಡೆದ ಅರಿವು. ಬಾಳೇ ನೀಡಿದ ಅರಿವು. ಆದರೆ ಬಾಳಿಗೆ ಶರಣಾಗುವುದರ ಹೊರ ರೂಪವೆಂದರೆ ಗಂಡು- ಹೆಣ್ಣನ್ನು, 'ಶರಣು ಬಂದೆನು ಶರಣ್ಯಳೆ ಹೆಣ್ಣೆ ಸೃಷ್ಟಿಯೇಸಲಹುವೆ ಧರಿತ್ರಿಯಾಗಿ' ಎಂದು ಆರ್ತತೆಯಿಂದ ಕೇಳಿಕೊಳ್ಳುವುದೇ ಕವನದಲ್ಲಿ ವ್ಯಕ್ತವಾಗಿದೆ. ಈ ಆರ್ತತೆ ಎಂದರೆ ಬಾಳ ಬಟ್ಟೆಯನ್ನು ತಾವೂ ನೇಯುತ್ತಿರುವ ಅನುಭವವೂ ಆಗಿದೆ. ಇಬ್ಬರೂ ಹೊದ್ದಿರುವುದು ಒಂದೇ ಬಟ್ಟೆಯಾಗಿರುವುದರಿಂದ ಯಾರು ಯಾರ ಬಟ್ಟೆಯನ್ನು ಕಸಿಯುವ ಯತ್ನ ಮಾಡಿದರೂ ಅದು ತಮ್ಮನ್ನೇ ತಾವು ಬತ್ತಲೆ ಮಾಡಿಕೊಂಡಂತೆ ಆಗುವುದು .ಇದು ನಿಜವಾದರೂ, ಚರಿತ್ರೆಯಲ್ಲಿ ನೋಡಿದರೆ ಗಂಡಸು ಹೆಂಗಸಿನ ಬಟ್ಟೆಯನ್ನುಕಸಿಯುತ್ತಲೆಯೇ ಇದ್ದಾನೆ. ಆ ಮೂಲಕ ತಾನು ಬತ್ತಲೆ ಯಾಗುತ್ತಲೇ ಇದ್ದಾನೆ. ಕೃಷ್ಣನೇನೋ ದ್ರೌಪದಿಗೆ ಅಕ್ಷಯಾಂಬರ ವನ್ನು ಕೃಪೆ ಮಾಡಿರಬಹುದು. ಆದರೇನು? ಸೀರೆಯನ್ನು ಸೆಳೆಯುವ ಯತ್ನವೂ ಅಕ್ಷಯವಾಗಿ ನಡೆಯುತ್ತಲೇ ಇದೆ! ದುಷ್ಟರಿಗೂ ದೈವಕೃಪೆ ಇರದೆ! ಕವಿತೆಯೊಳಗೆ ಈ ಅಂಶ ಬಂದಿಲ್ಲ. ಅದು ಬೇರೆ ಮಾತು.

ಬೇಂದ್ರೆ 'ಸಖೀಗೀತ' ಎಂದರು. ಹಾಡಿದರು. ಸಖ- ಸಖಿ ಎಂಬ ಭಾವ ಸಂಪ್ರದಾಯಕ್ಕಿಂತ ತುಸು ಬೇರೆಯಾದದ್ದು. ಆಧುನಿಕವಾದದ್ದು. ಆದರೆ ಬೇಂದ್ರೆಯವರ ಸಖಿ ಆಧುನಿಕ ಕನ್ನಡ ಕಾವ್ಯದ ಮೊದಲ ಸಖಿಯಲ್ಲ. ನಂದಳಿಕೆಯವರ ರಾಮಾಶ್ವಮೇಧದಲ್ಲಿ ಬರುವ ಮನೋರಮೆ ಆಧುನಿಕ ಕನ್ನಡ ಕಾವ್ಯದ ಮೊದಲ ಸಖಿ. ಹಳೆಗನ್ನಡದಲ್ಲಿ ಹೇಳಲ್ಪಟ್ಟಿದ್ದರೂ ಹಳೆಯ ಕಥೆಯೇ ಆಗಿದ್ದರೂ ಗಂಡು ಹೆಣ್ಣಿನ ಮಾತುಕತೆಯಲ್ಲಿ ರೂಪ ತಳೆಯುವ ಅದೊಂದು ಬಗೆಯ ಆಧುನಿಕ ವಿನ್ಯಾಸ ನಂದಳಿಕೆಯವರ ಕೃತಿಯಲ್ಲಿದೆ. ನಿಜ, ನಮ್ಮ ಅನೇಕ ಪುರಾಣ ಕಥೆಗಳು ಶಿವ ಪಾರ್ವತಿಗೆ ಹೇಳಿದಂತೆ ಹೇಳಲ್ಪಟ್ಟಿವೆ! ಆದರೆ ಮುದ್ದಣನ ಕೃತಿಯಲ್ಲಿ ಮನೋರಮೆ ಕಥೆಯ ಕೇಳುಗಳು ಮಾತ್ರವಲ್ಲ ಕಥೆಯನ್ನು ವಿಮರ್ಶೆಯೂ ಮಾಡುತ್ತಾಳೆ . ಸೀತಾ ಪರಿತ್ಯಾಗದ ಅನಂತರದ ಕಥೆಯನ್ನು ಮುದ್ದಣ 'ಇತ್ತಲಿತ್ತಲ್ ಅಯೋಧ್ಯೆಯೊಳ್ ಸೀತಾರಾಮಂ' ಎಂದು ತೊಡಗುವಾಗ ಅಲ್ಲಿಯೇ ಮನೋರಮೆ ಆ ಮಾತನ್ನು ಕತ್ತರಿಸುತ್ತಾಳೆ. ಸೀತೆಯನಗಲ್ದ ಮೇಲಿನ್ನಿತ್ತಣ ಸೀತಾರಾಮಂ? ಎಂದು ಸೀತಾರಾಮ ಎಂಬ ಪದಪ್ರಯೋಗವನ್ನು ಆಕ್ಷೇಪಿಸುತ್ತಾಳೆ. ಇಲ್ಲಿ ಸಖಿ ವಿಮರ್ಶಕಿಯೂ ಆಗಿದ್ದಾಳೆ. ಅಂದರೆ ಬೌದ್ಧಿಕ ಸಹಚರಿಯೂ ಆಗಿದ್ದಾಳೆ. ಪ್ರಾಚೀನದಲ್ಲಿ ಈ ಬೌದ್ಧಿಕ ಸಾಹಚರ್ಯದ ಕಲ್ಪನೆ ಇತ್ತು. ಮೈತ್ರೇಯಿ ಯಾಜ್ಞವಲ್ಕ್ಯರ ಸಂವಾದಗಳಲ್ಲಿ ಇದು ವ್ಯಕ್ತವಾಗಿದೆ. ವಾಙ್ಮಯ ಇತಿಹಾಸದಲ್ಲಿಯೇ ಮೊದಮೊದಲ ವಾಙ್ಮಯಗಳಿವು- ಉಪನಿಷತ್ತುಗಳು. ಮಧ್ಯಯುಗದಲ್ಲಿ ಈ ಬೌದ್ಧಿಕ ಸಾಹಚರ್ಯ ಮರೆಗೆ ಸರಿಯಿತು. ಆಧುನಿಕ ಯುಗದಲ್ಲಿ ಮತ್ತೆ ಇದರ ಹೊಳಹು ಸಹಜವಾಗಿ ಮಿಂಚುತ್ತಿದೆ!

**■ ತೋಷ**

## ಮಾತೇ ಮುತ್ತು

★ ಒಂದು ಉತ್ತಮ ಪುಸ್ತಕ ಓದುವುದರಿಂದ ಒಬ್ಬ ಮಹಾತ್ಮನ ಸ್ನೇಹ ಸಂಗದಿಂದ ಬರಬಹುದಾದ ಲಾಭ ಪಡೆಯಬಹುದು.
-ಕುವೆಂಪು

★ ಎಲ್ಲ ಮಕ್ಕಳೂ ಕಲಾವಿದರೇ. ದೊಡ್ಡವರಾದ ಮೇಲೂ ಅವರು ಕಲಾವಿದರಾಗಿ ಉಳಿಯುವುದು ಹೇಗೆ ಎನ್ನುವುದಷ್ಟೇ ಪ್ರಶ್ನೆ.
-ಪಾಬ್ಲೊ ಪಿಕಾಸೊ

★ ಯೌವನವನ್ನು ಜಾಗರೂಕತೆಯಿಂದ ಕಳೆದವನ ವೃದ್ಧಾಪ್ಯ ಸುಖಕರವಾಗಿರುತ್ತದೆ.
-ಲಿಡಿಯಾ ಚೈಲ್ಡ್

★ ತಪ್ಪು ಶಿಕ್ಷಣ ಪಡೆದ ಮಗು ಕಳೆದುಹೋದಂತೆಯೇ.
-ಜಾನ್ ಎಫ್ ಕೆನಡಿ

★ ನಿನ್ನನ್ನು ನೀನು ಪ್ರೀತಿಸಿಕೊಂಡರೆ ಮಾತ್ರ ಇತರರನ್ನೂ ಪ್ರೀತಿಸಬಲ್ಲೆ. ಮೊದಲು ಅದನ್ನು ಕಲಿ.
-ಓಶೋ ರಜನೀಶ್

★ ನಿನಗೆ ಪವಿತ್ರ ಗ್ರಂಥಗಳ ಬರಿಯ ಓದಿನಿಂದ ಏನೂ ಸಿಗುವುದಿಲ್ಲ. ಯಾಕೆಂದರೆ ನೀನು ಅವನನ್ನು ನಿನ್ನ ಹೃದಯದಲ್ಲಿ ಹುಡುಕುತ್ತಿಲ್ಲ.
-ಸಂತ ಕಬೀರ